ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್: 114

ನೇ ವರ್ಷ 36 ನೇ ಸಂಚಿಕೆ ಕೊಪ್ಪ 3-4-1988 ಭಾನುವಾರ ಬೆಲೆ 25 ಪೈಸೆ

ಹೈಕೋರ್ಟ್ ಹೋರಾಟದಲ್ಲಿ

ವಂಚಕರೆದುರು ಸೋತ ವನಶ್ರೀ !?

ಕೊಪ್ಪ : ಮರಗಳ ಅಕ್ರಮ ಕಡಿತಲೆ ವಿರುದ್ಧ ಎಚ್ಚೆತ್ತ ರೈತರ ನೆರವಿನೊಂದಿಗೆ ಅರಣ್ಯ ಇಲಾಖೆಯ ನಿಷ್ಠಾವಂತ ಅಧಿಕಾರಿಗಳು ವಂಚಕ ಕಾಡುಕಳ್ಳರೊಡನೆ ನಡೆಸಿದ ಕಾನೂನಿನ ಹೋರಾಟವೊಂದರಲ್ಲಿ ಅರಣ್ಯಕ್ಕೇ ಸೋಲಾಗಿ ಅದೀಗ ಕೊಡಲಿಯನ್ನೆ ದುರಿಸುವ ಹಂತದಲ್ಲಿದೆ.

ಇಲ್ಲಿಗೆ ಸಮೀಪದ ಕುಂಬಾರಕೊಪ್ಪ ಗ್ರಾಮದ 50 ಎಕರೆ ಖಾಸಗಿ ಭೂಮಿಯಿಂದ ಮರಗಳನ್ನು ಕಡಿಯಲು ಅರಣ್ಯ ಕಂಟ್ರಾಕ್ಟರುಗಳ ಕಂಪೆನಿಯೊಂದು 1981-82ರಲ್ಲಿ ಪರವಾನಗಿ ಕೇಳಿದಾಗ, ಆಗಿನ ಡಿ.ಎಫ್.ಒ ವಿನ್ಸೆಂಟ್ ಲೂಥ್ರ ತಮ್ಮ ಕಛೇರಿಯ ಕಡತಗಳನ್ನು ಪರಿಶೀಲಿಸಿ, ಈ ಭೂಮಿಯಲ್ಲಿ 69-70ರಲ್ಲೇ ಮರ ಕಡಿತ ಮುಗಿದಿದ್ದು, ಈಗ ಮೂಲ ಸ್ಕೆಚ್‌ಗಳನ್ನು ಬದಲಿಸಿ, ಸರ್ಕಾರಿ ಅರಣ್ಯದಲ್ಲಿ ಹೊಸ ಸ್ಕೆಚ್ ಮಾಡಲಾಗಿರುವುದನ್ನು ಪತ್ತೆ ಹಚ್ಚಿ ಪರವಾನಗಿ ನಿರಾಕರಿಸಿದರು.

ಇದರ ಬಗ್ಗೆ ಮರ ವ್ಯಾಪಾರಿಗಳಿಗೂ ಅರಣ್ಯ ಅಧಿಕಾರಿಗಳಿಗೂ ಹೈಕೋರ್ಟಿನ ಏಕ ಸದಸ್ಯ ಪೀಠ ಮತ್ತು ವಿಭಾಗ ಪೀಠದೆದುರು ಸುಮಾರು ಆರು ವರ್ಷಗಳ ಕಾಲ ನಡೆದ ಈ ಸುದೀರ್ಘ ಹೋರಾಟದಲ್ಲಿ ಬಹುಶಃ ತಾಂತ್ರಿಕ ಕಾರಣಗಳ ಆಧಾರದಲ್ಲಿ ಮರ ವ್ಯಾಪಾರಿಗಳಿಗೆ ಜಯ ಲಭಿಸಿರುವಂತೆ ತೋರುತ್ತಿದೆ.

ಇದೇ ಹಿನ್ನಲೆಯಲ್ಲಿ ಆಗಿನ ಜಿಲ್ಲಾಧಿಕಾರಿ ಬಿ. ಪಾರ್ಥಸಾರಥಿ ಕೋರ್ಟ್ ನಿಂದನೆ ಆರೋಪಕ್ಕೂ ಒಳಗಾಗಿ ಕ್ರಮ ಎದುರಿಸಬೇಕಾಗಿ ಬಂದಿದೆ.

ಸುಮಾರು 50 ಲಕ್ಷಕ್ಕೂ ಮಿಕ್ಕಿ ಬೆಲೆ ಬಾಳುವುದೆನ್ನಲಾಗಿರುವ ಈ ಅರಣ್ಯಕ್ಕೆ ಇದೇ ಕೊನೆಯೋ ಅಥವಾ ಇನ್ನಾವುದಾದರೂ ರೀತಿಯಲ್ಲಿ ಉಳಿಗಾಲವಿದೆಯೋ ಎಂಬುದು ಜನತೆಯ ಕುತೂಹಲಕ್ಕೆ ಕಾರಣವಾಗಿದೆ.

ಸಾಗರ 30-3-1988

ಚಿಕಣಿ 4500 – 4910

ಚಾಲಿ : 1200 – 1850

ಇಡಿ : 1900 – 2400

ಚಿಪ್ಪಿಗೋಟು : 400 – 850

ಮಂಗಳೂರು 2.4.1988

ಏಲಕ್ಕಿ : 140 – 160

ಕಾಳು ಮೆಣಸು: 3854

ಏಲಕ್ಕಿ ಧಾರಣೆ

ಸಕಲೇಶಪುರ 25.3.1988

ಸರಾಸರಿ : 136 - 160

ಶಿರ್ಸಿ 25 3 1988

180 – 156

ಅಡಿಕೆ ಧಾರಣೆ

ಶಿವಮೊಗ್ಗ 30-3-1988

ಸರಕು 3600 – 4580

ಬೆಟ್ಟೆ 2500 – 3340

ಗೊರಬಲು : 800 – 1312

ಕೊಪ್ಪದಲ್ಲಿ ವೇಶ್ಯಾವಾಟಿಕೆ ನಡೆಸಿದ ಆರೋಪದಲ್ಲಿ

ಯುವತಿ, ಮತ್ತಿಬ್ಬರ ಬಂಧನ

ಕೊಪ್ಪ : ಎರಡು ವರ್ಷಗಳ ಹಿಂದೆ ಕಳ್ಳತನದ ಪ್ರಕರಣವೊಂದರಲ್ಲಿ ಬಂಧಿಸಲ್ಪಟ್ಟು, ಆಗಿನ ಸರ್ಕಲ್ ಇನ್ಸ್‌ಪೆಕ್ಟರ್ ಮುಂಡಲ್ಕರ್‌ರ ಹುಚ್ಚಾಟದಿಂದಾಗಿ ಬಿಡುಗಡೆಗೊಂಡಿದ್ದ ನಾರ್ವೆಯ ಚಂದ್ರಶೇಖರ (ಎ. ಎಸ್. ರಾಮಕೃಷ್ಣಯ್ಯ ಅವರ ಮಗ) ಕೊಪ್ಪದಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಆಪಾದನೆಯ ಮೇಲೆ ಬಂಧಿಸಲ್ಪಟ್ಟಿದ್ದಾನೆ.

ಕಾರ್ಕಳ ತಾಲ್ಲೂಕಿನ ಪುತ್ತಿಗೆಯವಳೆನ್ನಲಾದ ನ್ಯಾನ್ಸಿ ಎಂಬ ಯುವತಿಯನ್ನು ಈತ ಇನ್ನೊಬ್ಬ ಚಂದ್ರ ಎಂಬವನ ಕೋಣೆಯಲ್ಲಿಟ್ಟುಕೊಂಡು 'ಧಂಧೆ' ನಡೆಸುತ್ತಿದ್ದ ಎನ್ನಲಾಗಿದೆ. ಕೊಪ್ಪ ಪೋಲೀಸರು ಮಾ. 29 ರಂದು ಇಬ್ಬರನ್ನೂ ಬಂಧಿಸಿದ್ದು, ಮೂರನೆಯ ಚಂದ್ರನಿಗೂ ವಾರಂಟ್ ಆಗಿದೆ. ಆತ ತಲೆ ತಪ್ಪಿಸಿಕೊಂಡಿದ್ದಾನೆ.

29ರ ರಾತ್ರಿ ಯುವತಿಯನ್ನು ಕಾನ್ವೆಂಟ್ ಶಾಲೆಯ ಹಾಸ್ಟೆಲ್‌ನಲ್ಲಿ 'ಮಾನವೀಯ ದೃಷ್ಟಿಯಿಂದ' ಇರಿಸಿದ್ದು ಮರುದಿನ ಕೋರ್ಟಿಗೆ ಹಾಜರುಪಡಿಸಲಾಯಿತು. ಇಬ್ಬರು ಆರೋಪಿಗಳೂ ತಪ್ಪೊಪ್ಪಿಕೊಂಡು ತಲಾ 200 ರೂ. ಜುಲ್ಮಾನೆ ತೆತ್ತರು.

ರಾಜ್ಯ ಮಟ್ಟದ ಕೆಸರುಗದ್ದೆ ಓಟ, ಹಗ್ಗ ಎಳೆದಾಟ :

ರೋಮಾಂಚಕ ಸೆಣಸಾಟದಲ್ಲಿ ಅರ್ಹರ ಜಯ

ಕೊಪ್ಪ : ಅಕ್ಕ ಪಕ್ಕ ಪಟಪಟನೆ ಕೆಸರೆರಚುತ್ತ ಕಂಬಳದ ಕೋಣಗಳಂತೆ ಬುಸುಗುಡುತ್ತ ಓಡಿದರು. ಡಿಕ್ಕಿಯಾಗಿ, ಜಾರಿ ಅಥವಾ ಕಾಲು ಸೋತು ಕೆಸರಲ್ಲಿ ಬಿದ್ದರು- ಮುಳುಗೆದ್ದರು- ಮತ್ತೂ ಓಡಿದರು. ಕಬ್ಬಿಣದ ನೇಗಿಲಿಗೆ ಕಟ್ಟಿದ ಗೂಳಿಗಳಂತೆ ಹೆಜ್ಜೆಯೂರಿ, ಮಂಡಿಯೂರಿ ಹಗ್ಗ ಎಳೆದರು. ಆ ಕೆಸರಲ್ಲಿ ಬಿದ್ದು ಮುಳುಗಿದರೂ ಒಂದಿಂಚೂ ಹಗ್ಗ ಜಾರದಂತೆ ಕಚ್ಚಿಕೊಂಡರು.

ಇತ್ತ— ಹೆಜ್ಜೆಯ ಮೇಲೆ ನಿಂತ (ಪ್ರೇಕ್ಷಕರ) ಪಾದಗಳು ಹೆಬ್ಬೆರಳ ಮೇಲೆ, ಕೊನೆಗೆ ಉಗುರಿನ ಮೇಲೆ ನಿಂತವು. ಕಿರುಚಿ ಗಂಟಲು ಹರಿದುಕೊಂಡು, ತಮ್ಮ ತಮ್ಮ 'ಕೋಣ'ಗಳನ್ನು ಹುರಿದುಂಬಿಸಿದರು. ನಿಮಿಷ ನಿಮಿಷಕ್ಕೂ ಉದ್ವೇಗ, ನಗು, ಕೇಕೆ, ರೋಮಾಂಚನ!

—ಇದು ಏಪ್ರಿಲ್ 3 ರಂದು ಇಲ್ಲಿ ನಡೆದ ರಾಜ್ಯ ಮಟ್ಟದ ಕೆಸರು ಗದ್ದೆಯ ಓಟ ಮತ್ತು ಹಗ್ಗ ಎಳೆದಾಟದ ಸ್ಪರ್ಧೆಗಳಲ್ಲಿ ಮೂಡಿ ಬಂದ ನೋಡುಗರ ಮೈ ನವಿರೇಳಿಸಿದಂಥ ತೀವ್ರ ಸೆಣಸಾಟದ ಸ್ಥೂಲ ಚಿತ್ರಣ. ಬಾಳಗಡಿಯ ಸರ್ವೋದಯ ಯುವಕ ಸಂಘ ಮತ್ತು ಯುವಜನ ಸೇವಾ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಪಂದ್ಯಾವಳಿ ನಡೆಯಿತು.

ಎರಡೂ ಸ್ಪರ್ಧೆಗಳಲ್ಲಿ ಯುವಕರ ಮತ್ತು ಯುವತಿಯರ ವಿಭಾಗಗಳೆರಡರಲ್ಲೂ ಇಂಥದೇ ಹೆಜ್ಜೆ-ಹೆಜ್ಜೆಯ ಸೆಣಸಾಟ, ದೃಢ ನಿಶ್ಚಯದ ಹೋರಾಟ ಕಂಡು ಬಂತು. ಅಂತಿಮವಾಗಿ ಅರ್ಹರು ಜಯಶಾಲಿಗಳಾದರು.

ಫಲಿತಾಂಶಗಳು : ಓಟ

ಯುವಕರ ವಿಭಾಗ:

ಬಿಜಯ್ ವರ್ಗೀಸ್ -I,
ಸಿ. ಪಿ. ಎಡ್. ಕಾಲೇಜು. ಕೊಪ್ಪ
ನಾಗೇಂದ್ರ, ಕುಡುಮಲ್ಲಿಗೆ -II,
ಗೋಪಾಲ ಗೌಡ. ಬಾಳೆಹೊನ್ನೂರು -III

ಯುವತಿಯರ ವಿಭಾಗ:

ಲತಾ, ಸಿ. ಪಿ ಎಡ್. ಕಾಲೇಜು -I,
ಅಲ್ಫೋನ್ಸಮ್ಮ, ಧರ್ಮಸ್ಥಳ -II,
ಸಿಸ್ಸಿ ಮತಾಯಸ್,
ಸಿ.ಪಿ.ಎಡ್. ಕಾಲೇಜು -III

ಹಗ್ಗ ಎಳೆದಾಟ :

ಯುವಕರು : ಬಂಡಿಗಡಿ ತಂಡ -I
ಸ್ಟೀಫನ್ ತಂಡ, ನೇತ್ರಕೊಂಡ -II
ಯುವತಿಯರು : ಸುಂದರಿ ಮತ್ತು ತಂಡ
ನೇತ್ರಕೊಂಡ -I
ಚೇತನಾ ಯುವತಿ ಮಂಡಳಿ ಬಾಳಗಡಿ -II

ಸಂಕ್ಷಿಪ್ತ ಸುದ್ದಿಗಳು

ದೈ. ಶಿ. ಶಿಕ್ಷಕರ ಬೇಡಿಕೆ

ಪ್ರೌಢ ಶಾಲಾ ಹಂತದವರೆಗೆ ದೈಹಿಕ ಶಿಕ್ಷಣವು ಪರೀಕ್ಷಾ ವಿಷಯವಾಗಬೇಕು, ತಮ್ಮನ್ನು 'ಸಹ ಶಿಕ್ಷಕ'ರೆಂದು ಪರಿಗಣಿಸಿ ತತ್ಸಮಾನ ಸವಲತ್ತು ನೀಡಬೇಕು, ದೈಹಿಕ ಶಿಕ್ಷಣಕ್ಕೆ ಪ್ರತ್ಯೇಕ ನಿರ್ದೇಶನಾಲಯ ಸ್ಥಾಪನೆ ಮುಂತಾದ 8 ಬೇಡಿಕೆಗಳೊಂದಿಗೆ ರಾಜ್ಯದ ಸುಮಾರು 3 ಸಾವಿರ ಮಂದಿ ದೈ. ಶಿ. ಶಿಕ್ಷಕರು ಬೆಂಗಳೂರಿನಲ್ಲಿ ಮಾ. 28 ರಂದು ಬಾಯಿಗೆ ಕಪ್ಪು ಬಟ್ಟೆ ಕಟ್ಟಿಕೊಂಡು ಮೌನ ಮೆರವಣಿಗೆ ನಡೆಸಿ, ವಿದ್ಯಾ ಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಆಯುರ್ವೇದ ಕಾಲೇಜು ವಾರ್ಷಿಕೋತ್ಸವ

ಕೊಪ್ಪದ ಎ. ಎಲ್. ಎನ್. ರಾವ್ ಆಯುರ್ವೇದ ಕಾಲೇಜಿನ ಮೊದಲ ವಾರ್ಷಿಕೋತ್ಸವ ಎ. ಮನೋಹರ ರಾವ್ ಅಧ್ಯಕ್ಷತೆಯಲ್ಲಿ ನಡೆಯಿತು. ಡಾ|| ಎಂ. ಜಿ. ಪ್ರಸಾದ್ ಮುಖ್ಯ ಅತಿಥಿಗಳಾಗಿದ್ದರು. ಪ್ರಿನ್ಸಿಪಾಲ್ ಡಾ| ಎ ವಿ. ಜೋಷಿ ಸ್ವಾಗತಿಸಿದರು. ವಿದ್ಯಾರ್ಥಿಗಳಿಂದ ಮನರಂಜನಾ ಕಾರ್ಯಕ್ರಮಗಳು ನಡೆದವು.

ದಾಸಮಠ ರಥೋತ್ಸವ

ಕೊಪ್ಪದ ದಾಸಮಠದಲ್ಲಿ ವೆಂಕಟರಮಣ ಸ್ವಾಮಿ ರಥೋತ್ಸವ ಏ. 11ರಂದು ನಡೆಯುತ್ತದೆ. ಆದಿಚುಂಚನಗಿರಿಯ ಮಠಾಧೀಶರು ಭಾಗವಹಿಸುವರು

ರಾ|| ಸ|| ನೌಕರರ ಸಂಘಕ್ಕೆ ಆಯ್ಕೆ

ರಾಜ್ಯ ಸರ್ಕಾರಿ ನೌಕರರ ಸಂಘದ ಶೃಂಗೇರಿ ಘಟಕಕ್ಕೆ ಆಯ್ಕೆಯಾಗಿರುವವರು : ಬಿ. ಎನ್. ರಾಜಶೇಖರ್ (ಅಧ್ಯಕ್ಷ), ವರ್ಧಮಾನಯ್ಯ (ಉಪಾಧ್ಯಕ್ಷ), ಎ. ಸತ್ಯನಾರಾಯಣ (ಪ್ರ ಕಾ.), ಎಸ್. ರಾಮಚಂದ್ರ ಭಟ್ಟ (ಸ. ಕಾ.), ಎಸ್. ಎಚ್. ಕುಮಾರ ಸ್ವಾಮಿ (ಸಂ. ಕಾ.) ಮತ್ತು ಡಾ|| ನಾಗರಾಜ್ (ಖಜಾಂಚಿ)

ಕೊಪ್ಪ ಘಟಕ : ಎಂ. ಎಲ್. ಗುರಪ್ಪ ಗೌಡ (ಅಧ್ಯಕ್ಷ), ಎ. ಡಿ. ರಂಗಪ್ಪ (ಉಪಾಧ್ಯಕ್ಷ), ಕೆ. ಎಸ್. ಸುಬ್ರಮಣ್ಯ (ಕಾರ್ಯದರ್ಶಿ), ನಸೀಮಾ ಫಾತಿಮ (ಖಜಾಂಚಿ). ಸಂಘದ ಸರ್ವಸದಸ್ಯರ ಸಭೆ ಹಾಗೂ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು ಮಾ. 13ರಂದು ನಡೆದವು.

ಕಾಫಿ ಮಂಡಳಿ ಸಹಾಯ

ಕಾಫಿ ಮಂಡಳಿಯ ಕಾರ್ಮಿಕ ಯೋಗಕ್ಷೇಮ ನಿಧಿಯಿಂದ ಜಿಲ್ಲೆಯ 6 ಶಾಲೆಗಳಿಗೆ ಮಂಜೂರಾಗಿರುವ ಆರ್ಥಿಕ ಸಹಾಯದ ವಿತರಣಾ ಸಮಾರಂಭ ಬಸರಿಕಟ್ಟೆಯಲ್ಲಿ ಸಹ್ಯಾದ್ರಿ ಕಾಫಿ ಬೆಳೆಗಾರರ ಸಂಘ ಮತ್ತು ಸದ್ಗುರು ವಿದ್ಯಾ ಸಮಿತಿಗಳ ಸಂಯುಕ್ತ ಆಶ್ರಯದಲ್ಲಿ ಮಾ. 27ರಂದು ನಡೆಯಿತು.

ಬೈಕ್ ಡಿಕ್ಕಿ : ಬಾಲಕನ ದುರ್ಮರಣ

ಹೇರೂರು : ಮಾ. 27 ರಂದು ಶಾಂತಿಪುರ ಬಸ್ ನಿಲ್ದಾಣದ ಸಮೀಪ ಬೈಕ್ ಡಿಕ್ಕಿಯಾಗಿ ಜಯಪುರ ಕಟ್ಟೆಮನೆ ಕಂಟ್ರಾಕ್ಟ್ ಸಾಹೇಬರ 13 ವರ್ಷದ ಮಗ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾನೆ.

ಬೈಕ್ ಬಾಳೆಹೊನ್ನೂರು ಮೆಣಸುಕುಡಿಗೆ ವೆಂಕಟೇಶ ಎನ್ನುವವರದಾಗಿದ್ದು, ಬಾಳೆಹೊನ್ನೂರು ಪೋಲೀಸರು ತನಿಖೆ ಕ್ರಮ ಕೈಗೊಂಡಿರುವುದಾಗಿ ತಿಳಿದುಬಂದಿದೆ.

ಜಾತ್ಯತೀತ ವಿವಾಹ

ಕೊಪ್ಪ ತಾ|| ಹೇರೂರು ಸಮೀಪದ ತೋಟದಮನೆ ಟೈಲರ್ ಡ್ರೈವರ್ ರಘುಪತಿ ನಾಯ್ಕ ಮತ್ತು ಅಲ್ಲಿ ಅಡಿಕೆ ಸುಲಿತಕ್ಕೆ ಬಂದಿದ್ದ ತರೀಕೆರೆಯ ತಬ್ಬಲಿ ಯುವತಿ ಪದ್ಮಾ ಇವರ ವಿವಾಹ ಬಾಳೆಹೊನ್ನೂರು ದೇವಸ್ಥಾನದಲ್ಲಿ ಅಲ್ಲಿನ ಸಬ್‌ಇನ್‌ಸ್ಪೆಕ್ಟರ್ ನೆರವಿನೊಂದಿಗೆ ಸರಳವಾಗಿ ನೆರವೇರಿತು.

ಓದುಗರ ಪತ್ರಗಳು

ಫೀನಾಯಿಲ್ ಘಟಕದ ಕಟ್ಟಡಕ್ಕೆ ವಿರೋಧ : ಮಂಡಲ ಸದಸ್ಯರ ಪ್ರತಿಕ್ರಿಯೆ

ಮಾನ್ಯರೆ,

ಮಾರ್ಚ್ 20ರ ತಮ್ಮ ಸಂಚಿಕೆಯಲ್ಲಿ ಹರಂದೂರು ಮಂಡಲ ಪಂಚಾಯಿತಿ ವ್ಯಾಪ್ತಿಗೆ ಸೇರಿದ ರಾಘವೇಂದ್ರ ನಗರ ಬಡಾವಣೆಯಲ್ಲಿರುವ, ದ್ವಾರಕಾ, ಯೋಜನೆಯ ಫೀನಾಯಿಲ್ ಘಟಕದ ಕಟ್ಟಡ ನಿರ್ಮಾಣ ಕುರಿತ ಸಮಾಚಾರವನ್ನು ಪ್ರಕಟಿಸಿರುವುದು ಸರಿಯಷ್ಟೆ. ಆ ಬಗ್ಗೆ ಆ ಪ್ರದೇಶದ ಪ್ರತಿನಿಧಿಯಾದ ನಾನು ಕೆಳಕಂಡಂತೆ ಸಮಜಾಯಿಷಿ ನೀಡಬಯಸುತ್ತೇನೆ

ಈಗ್ಗೆ ಸುಮಾರು ಮೂರು ವರ್ಷಗಳಿಂದಲೂ ಈ ಬಡಾವಣೆಯ ಅಂಗನವಾಡಿ ಕೇಂದ್ರದ ಪಕ್ಕದಲ್ಲಿ ಕೆಲವು ಉತ್ಸಾಹೀ ಮಹಿಳೆಯರು ಈ ಘಟಕವನ್ನು ಪ್ರಾರಂಭಿಸಿ ಉತ್ತಮ ರೀತಿಯಲ್ಲಿ ನಡೆಸಿಕೊಂಡು ಬಂದಿದ್ದು ಘಟಕವು ಅಭಿವೃದ್ಧಿ ಹೊಂದುತ್ತಲಿದೆ. ಇದರ ಕಾರ್ಯ ಚಟುವಟಿಕೆಗಳನ್ನು ಮನಗಂಡು ಜಿಲ್ಲಾ ಪರಿಷತ್‌ನವರು ಇದಕ್ಕೆ ಒಂದು ಖಾಯಂ ಕಟ್ಟಡವನ್ನು ಅಂಗನವಾಡಿ ಕೇಂದ್ರದ ಪಕ್ಕದಲ್ಲಿದ್ದ ಸ್ಥಳದಲ್ಲಿ ಕಟ್ಟಿಸಿಕೊಡಲು ಕ್ರಮ ಕೈಗೊಂಡು ಕಟ್ಟಡ ನಿರ್ಮಾಣ ಮಾಡಿದ್ದಾರೆ ಇದನ್ನು ಜಿಲ್ಲಾ ಆರೋಗ್ಯಾಧಿಕಾರಿಗಳು ಸ್ಥಳಕ್ಕೆ ಬಂದಾಗ ಪರಿಶೀಲಿಸಿ ಅನುಮೋದಿಸಿದ್ದಾರೆ. ಇದೇ ಸ್ಥಳದಲ್ಲಿ ಹಿಂದಿನ ಮೂರು ವರ್ಷಗಳಿಂದಲೂ ಯಾವ ಗ್ರಾಮಸ್ಥರಿಗೂ ತೊಂದರೆ ಆಗದಂತೆ ಘಟಕದವರು ನಡೆಸಿಕೊಂಡು ಬಂದಿದ್ದಾರೆ. ಆದ್ದರಿಂದ ಇಲ್ಲಿ ಕಟ್ಟಡ ಕಟ್ಟಿ ಅದರಲ್ಲಿ ಫೀನಾಯಿಲ್ ತಯಾರಿಸುವುದರಿಂದ ಯಾರಿಗೂ ತೊಂದರೆ, ಅನಾನುಕೂಲಗಳು ಆಗುವುದಿಲ್ಲ.

ಸದರಿ ಸ್ಥಳದಲ್ಲಿ ಮಕ್ಕಳಿಗೆ ಆಡಲು ಜಾಗವಿಲ್ಲವಾಗುವುದೆಂಬ ಪುಕಾರು ಮಾಡಲಾಗಿದೆಯಾದರೂ ಈ ಸ್ಥಳದಲ್ಲಿ ಮಕ್ಕಳಾಟಕ್ಕೆ ಸಾಕಷ್ಟು ಪ್ರದೇಶ ಖಾಲಿ ಇರುತ್ತದೆ ಆದುದರಿಂದ ಸದರಿ ಘಟಕಕ್ಕೆ ಕಟ್ಟಡ ನಿರ್ಮಾಣ ಮಾಡುವುದರಿಂದ ಇಲ್ಲಿನ ನಿವಾಸಿಗಳಿಗೆ ಮತ್ತು ಮಕ್ಕಳ ಆರೋಗ್ಯಕ್ಕೆ ಹಾನಿಯುಂಟಾಗುತ್ತದೆಂಬ ದೂರು ಸಮಂಜಸವಲ್ಲವೆಂದು ನಾನು ಅಭಿಪ್ರಾಯಪಡುತ್ತೇನೆ.

—**ಜಿ.ಎಸ್. ಶ್ರೀನಿವಾಸ್,**
ಸದಸ್ಯ
ಹರಂದೂರು ಮಂಡಲ ಪಂಚಾಯ್ತಿ.

ಸೀಮೆಯೆಣ್ಣೆಗೆ ಬರ : ಹರಿಹರಪುರದ ಸರದಿ !

ಮಾನ್ಯರೆ,

ಇಲ್ಲಿನ ಸಹಕಾರ ಸಂಘಕ್ಕೆ ಸರಿಯಾಗಿ ಸೀಮೆ ಎಣ್ಣೆ ಸರಬರಾಜು ಇಲ್ಲದೆಯೋ ಅಥವಾ ಸಂಘದ ಬೇಜವಾಬ್ದಾರಿಯಿಂದಲೋ ಅಂತೂ, ತೀವ್ರ ವಿದ್ಯುತ್ ಕೊರತೆಯಿಂದಾಗಿ ಸೀಮೆಯೆಣ್ಣೆಯ ಅಗತ್ಯ ಅತೀ ಹೆಚ್ಚಾಗಿರುವ ಈ ಬೇಸಿಗೆಯ ಸಮಯದಲ್ಲೇ ಅದು ಗ್ರಾಹಕರಿಗೆ ಸರಿಯಾಗಿ ದೊರೆಯುತ್ತಿಲ್ಲ.

ಈ ಹಿಂದೆ ಸುತ್ತ ಮುತ್ತಲ ಊರುಗಳವರಿಗೂ ಸಹ ಡಬ್ಬಗಟ್ಟಲೆ ಸೀಮೆಯೆಣ್ಣೆ ಕೊಡುತ್ತಿದ್ದ ಇಲ್ಲಿ ಈಗ ಇಲ್ಲಿನ ಗ್ರಾಹಕರಿಗೇ ತೊಂದರೆಯಾಗಿದೆ. 25 ದಿನಗಳ ಹಿಂದೆ ಬಂದ ಎಣ್ಣೆಯನ್ನು ಕಾರ್ಡಿಗೆ 5 ಲೀಟರಿನಂತೆ ಹಂಚಿ ಎರಡೇ ದಿನದಲ್ಲಿ ಸುಮ್ಮನಾಗಿದ್ದರು. ಮಾ. 30 ರಂದು ಇಳಿಸಿದ 1000 ಲೀಟರನ್ನು ಕಾರ್ಡಿಗೆ ಕೇವಲ 3 ಲೀಟರಂತೆ ಹಂಚಿ ಒಂದೇ ದಿನ ಖಾಲಿಯಾಗಿದೆ ಈ ಹಂಚಿಕೆಯಲ್ಲೂ ಎಷ್ಟೋ ಜನ ಗ್ರಾಹಕರಿಗೆ ಸಿಕ್ಕಿಲ್ಲ.

ಸಂಬಂಧಪಟ್ಟವರು ಕೂಡಲೇ ಈ ಬಗ್ಗೆ ಸೂಕ್ತ ವ್ಯವಸ್ಥೆ ಮಾಡುತ್ತಾರೆಂದು ಆಶಿಸುವ ನೊಂದ ಗ್ರಾಹಕರ ಪರವಾಗಿ,

—**ಜ. ರಾ. ಶ. ಪ್ರಕಾಶ್,**
ಹರಿಹರಪುರ

ಮಂಡಲ ಪಂಚಾಯ್ತಿ ಹರಿಹರಪುರ

ಮರು ಹರಾಜು ಪ್ರಕಟಣೆ

ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ ಹರಿಹರಪುರ ಮಂಡಲ ಪಂಚಾಯ್ತಿಯಿಂದ ಈ ಕೆಳಗೆ ನಮೂದಿಸಿದ ಬಾಬುಗಳನ್ನು ಮುಂದೆ ಕಾಣಿಸಲಾದ ಅವಧಿಯವರೆಗೆ ಹರಿಹರಪುರ ಮಂಡಲ ಪಂಚಾಯ್ತಿಯ ಕಾರ್ಯಾಲಯದಲ್ಲಿ ದಿನಾಂಕ 12-4-88ರಂದು ಬೆಳಿಗ್ಗೆ 10 ಗಂಟೆಗೆ ಸರಿಯಾಗಿ ಮಂಡಲ ಪಂಚಾಯ್ತಿ ಪ್ರಧಾನರು ಅಥವಾ ಅವರಿಂದ ಅಧಿಕಾರ ಪಡೆದವರಿಂದ ಹರಾಜು ಮಾಡಲಾಗುವುದು. ಇಷ್ಟವುಳ್ಳವರು ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸವಾಲಿನಲ್ಲಿ ಪಡೆಯಬಹುದಾಗಿರುತ್ತೆ. ಷರತ್ತುಗಳನ್ನು ಮಂಡಲ ಪಂಚಾಯ್ತಿ ಕಾರ್ಯಾಲಯದಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತೆ.

ಕ್ರ. ಸಂ.	ಬಾಬುಗಳು	ಅವಧಿ
1.	ಸಾರಿಗೆ ನಿಲ್ದಾಣದ ಅಂಗಡಿ ಮಳಿಗೆ 1	3 ವರ್ಷಗಳು 15-4-88ರಿಂದ 31-3-91ರವರೆಗೆ
2.	ಸಾರಿಗೆ ನಿಲ್ದಾಣದ ಅಂಗಡಿ ಮಳಿಗೆ 2	3 ವರ್ಷಗಳು 15-4-88ರಿಂದ 31-3-91ರವರೆಗೆ
3.	ಸಾರಿಗೆ ನಿಲ್ದಾಣದ ಅಂಗಡಿ ಮಳಿಗೆ 3	3 ವರ್ಷಗಳು 15-4-88ರಿಂದ 31-3-91ರವರೆಗೆ
4.	ಸಾರಿಗೆ ನಿಲ್ದಾಣದ ಅಂಗಡಿ ಮಳಿಗೆ 4	3 ವರ್ಷಗಳು 15-4-88ರಿಂದ 31-3-91ರವರೆಗೆ
5.	ಜಮ್ಮಟಿಗೆ ಬಸ್ಟಾಪ್ ಅಂಗಡಿ ಮಳಿಗೆ	3 ವರ್ಷಗಳು 15-4-88ರಿಂದ 31-3-91ರವರೆಗೆ
6.	ಅಸಗೋಡು ಗಣಪತಿಕಟ್ಟೆ ದೊಡ್ಡಿ	3 ವರ್ಷಗಳು 15-4-88ರಿಂದ 31-3. 91ರವರೆಗೆ
7.	ಬೊಮ್ಲಾಪುರ ದೊಡ್ಡಿ	3 ವರ್ಷಗಳು 15-4-88ರಿಂದ 31-3-91ರವರೆಗೆ
8.	ಹೊನಗೋಡು ಬಸ್ಟಾಪ್ ಅಂಗಡಿ ಮಳಿಗೆ	3 ವರ್ಷಗಳು 15-4-88ರಿಂದ 31-3-91ರವರೆಗೆ

ವೈ. ವಿ. ಗಣಪತಿ ಶಾಸ್ತ್ರಿ, ಬಿ ಎ.,
ಕಾರ್ಯದರ್ಶಿ,

ಎ. ಆರ್. ಜಯಪ್ರಕಾಶ್,
ಪ್ರಧಾನರು,

ಹರಿಹರಪುರ ಮಂಡಲ ಪಂಚಾಯ್ತಿ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್, ಅಚ್ಚು : ದೀಪಟಿಗೆ ಅಚ್ಚುಕೂಟ, ಕೊಪ್ಪ.